ಖಾನೇಷುಮಾರಿ ನಂ. ೨೪ ಗರುಡಿ ಮನೆ ಬಂಜರು ಜಾಗ ಎಂದು ದಾಖಲೆ ಇದ್ದು ಅದನ್ನು ಕೆಂಚ ವೀರಪ್ಪ ಬಿನ್ ಹೊಳೆಯಪ್ಪ ಎಂದು ಮಾಡಿ ಇವರೇ ಮಾಡಿಕೊಂಡಿದ್ದಾರೆ. ಖಾನೇಷುಮಾರಿ ನಂ. ೧ ರಲ್ಲಿ ಯಾವ ಆಧಾರವಿಲ್ಲದೆ ಅವರ ಹೆಸರಿಗೆ ಖಾತೆ ಮಾಡಿಕೊಂಡಿದ್ದಾರೆ. ಈ ರೀತಿ ಹತ್ತಾರು ಪ್ರಕರಣಗಳಲ್ಲಿ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದರೂ ಈ ಬಗ್ಗೆ ಸರಿಯಾದ ಆಡಿಟ್ ಆಗದೇ ಇದನ್ನು ಮುಚ್ಚಿ ಹಾಕುವ ಪ್ರಯತ್ನವನ್ನು ಈ ಹಿಂದೆ ಇದ್ದ ಕೆಲವು ಅಧಿಕಾರಿಗಳು ಮಾಡಿದ್ದಾರೆ. ಆದ್ದರಿಂದ ಈ ಬಗ್ಗೆ ವಿಶೇಷ ತನಿಖೆ ಮಾಡಿಸಿ ತಪ್ಪಿಸ್ಥರ ಮೇಲೆ ಕ್ರಮ ಕೈಗೊಳ್ಳುವ ಸಾರ್ವಜನಿಕ ಮಹತ್ವವಾದ ಈ ವಿಷಯದ ಬಗ್ಗೆ ಸರ್ಕಾರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಈ ವಿಷಯವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಈ ಸಭೆಯಲ್ಲಿ ಉತ್ತರ ಕೊಡುವಂತಹ ವ್ಯವಸ್ಥೆ ಮಾಡುತ್ತೇನೆ.

## (೬) ರಾಜ್ಯದಾದ್ಯಂತ ಪೌರ ಕಾರ್ಮಿಕರ ಮುಷ್ಕರದ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.—ಕರ್ನಾಟಕದಾದ್ಯಂತ ಪೌರ ಕಾರ್ಮಿಕರು ತಮ್ಮ ನ್ಯಾಯ ಯುತ ಬೇಡಿಕೆಗಳಿಗಾಗಿ ಹೋರಾಟದ ದಾರಿಗೆ ಇಳಿದಿದ್ದು ಅವರ ಮುಷ್ಕರದಿಂದಾಗಿ ನಗರ ಪ್ರದೇಶ ಗಳು ಕೊಳಚೆಯಿಂದ ತುಂಬಿದ್ದು ಈ ನಗರವಾಸಿಗಳಿಗೆ ತೊಂಬಾ ತೊಂದರೆಯಾಗಿದೆ. ಅವರ ನ್ಯಾಯ ವಾದ ಬೇಡಿಕೆ, ಅವರ ಸಂಬಳ ಸಾರಿಗೆಯನ್ನು ಟ್ರೆಜರಿಯಿಂದ ಕೊಡುವಂತಾಗಬೇಕು ಎನ್ನುವುದು. ಇದು ನ್ಯಾಯುತವಾದ ಬೇಡಿಕೆ ಕೂಡ ಆಗಿದೆ, ಅವರ ಇತರೇ ಬೇಡಿಕೆಗಳಲ್ಲಿ ಬಹಳವಾಗಿ ಒಪ್ಪು ವಂಥಾದ್ದು ಇದೆ. ಈಗಿನ ಮುಷ್ಕರದಿಂದಾಗಿ ಆಗಿರುವ ತೊಂದರೆಯನ್ನು ಸದನದ ಗಮನಕ್ಕೆ ತರುವುದು ಬಹಳ ಮುಖ್ಯ. ಇದು ಬಹಳ ಮುಖ್ಯವಾದ ಸಮಸ್ಯೆಯಾದುದರಿಂದ ಈ ಗಮನ ಸೆಳೆಯುವ ಸೂಚನೆಯನ್ನು ತ್ವರ್ಯ ಮೂಲಕ ತರುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರ ಬಗ್ಗೆ ಇನ್ನೂ ಕೆಲವು ಸದಸ್ಯರು ಕೊಟ್ಟಿದ್ದಾರೆ. ಮಾನ್ಯಮಂತ್ರಿಗಳು ಇಲ್ಲ, ಇದು ಬಹಳ ಮುಖ್ಯವಾದ ಸಮಸ್ಯೆಯಾಗಿದೆ. ಆ ಸದನದಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಇದು ಚರ್ಚೆಗೆ ಬರುವಾಗ ಎದ್ದು ಹೋದರು.

ಶ್ರೀ ಜಿ. ಬಸವಣ್ಣಪ್ಪ.—ಸಂಬಂಧಪಟ್ಟ ಸಚಿವರು ವಿಧಾನ ಪರಿಷತ್ತಿನಲ್ಲಿದ್ದಾರೆ.

ಅಧ್ಯಕ್ಷರು.—ಸ್ಟೇಟ್‌ಮೆಂಟ್ ರೆಡಿ ಇದ್ದರೆ ತಿಳಿಸುವುದಕ್ಕೆ ಹೇಳುತ್ತೇನೆ. ಉತ್ತರ ಇವತ್ತು ಬಂದರೆ ಅವಕಾಶ ಕೊಡುತ್ತೇನೆ.

ಶ್ರೀ ವಸಂತ ಬಂಗೇರ.—ಮಾನ್ಯ ಸದಸ್ಯರು ಗೈರು ಹಾಜರು.

## (೭) ಗಂಗಾವತಿಯ ಮರಳಿ ಸಕ್ಕರೆ ಕಾರ್ಖಾನೆ ಮುಚ್ಚಿರುವುದರಿಂದ ರೈತರಿಗೆಆಗಿರುವ ತೊಂದರೆ.

ಶ್ರೀ ಶ್ರೀರಂಗದೇವರಾಯಲು (ಗಂಗಾವತಿ).—ಮಾನ್ಯ ಅಧ್ಯಕ್ಷರೇ, ಗಂಗಾವತಿ ತಾಲ್ಲೂಕಿನ ಮರಳಿ ಸಕ್ಕರೆ ಕಾರ್ಖಾನೆ ಕೆಲವು ವರ್ಷಗಳಿಂದ ನಡೆಯದೆ ನಿಂತಿದ್ದು, ರೈತರು ಅವರು ಬೆಳೆದ ಕಬ್ಬನ್ನು ಬಹಳ ದೂರದ ಕಾರ್ಖಾನೆಗಳಿಗೆ ಸಾಗಿಸುವ ತೊಂದರೆಯನ್ನು ಸುಮಾರು ೪-೫ ವರ್ಷ ಗಳಿಂದಲೂ ಅನುಭವಿಸುತ್ತಾ ಬಂದಿದ್ದಾರೆ. ಈ ವರ್ಷ ರೈತರು ಸುಮಾರು ೩ ಸಾವಿರ ಎಕರೆ ಜಮೀನಿನಲ್ಲಿ ಕಬ್ಬು ಬೆಳೆದಿದ್ದು ಕಾರ್ಖಾನೆಯನ್ನು ಪ್ರಾರಂಭಿಸದಿದ್ದಲ್ಲಿ ರೈತರು ಬಹಳ ತೊಂದರೆಯನ್ನು ಎಂದಿನಂತೆ ಎದುರಿಸಬೇಕಾಗುತ್ತದೆ. ಆದ್ದರಿಂದ ಈಗಲಾದರೂ ಸರಕಾರದವರು ಶೀಘ್ರ ಕ್ರಮ ಕೈಕೊಂಡು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸಿದಲ್ಲಿ ರೈತರಿಗೆ ತುಂಬಾ ಅನುಕೂಲವಾಗುವುದರಿಂದ ಸದರಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸಲು ಸಂಬಂಧಪಟ್ಟವರಿಗೆ ಆದೇಶ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಇದನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇನೆ. ನನಗೆ ಗೊತ್ತಿರುವ ಮಟ್ಟಿಗೆ ಅಲ್ಲಿ ಕಬ್ಬು ಬೆಳೆಯುವವರಿಗೆ ತೊಂದರೆಯಾಗ ಬಾರದು ಎಂದೇ ಕಂಪನಿಗಳವರು, ಫ್ಯಾಕ್ಟರಿಗಳವರು ತೆಗೆದುಕೊಳ್ಳುತ್ತಿದ್ದಾರೆ ಮತ್ತು ಬೇರೆ ಕಡೆ ತೆಗೆದುಕೊಳ್ಳುವ ವ್ಯವಸ್ಥೆ ಮಾಡಿ ಕೊಟ್ಟಿದ್ದೇವೆ. ಕಬ್ಬು ಬೆಳೆಯತಕ್ಕವರಿಗೆ ತೊಂದರೆಯಾಗಿಲ್ಲ ಎಂದು ನನ್ನ ಭಾವನೆ. ಆದರೂ ಅವರ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇನೆ.